‘ಶೀ ಚೀಟೆಡ್ ಮೈಲವ್, ಡಿವೋರ್ಸ್ ಆಗ್ತಿದೆ. ಹಾಗಂತ ನೀನು ಬೇಕೂಂತಲ್ಲ...’

‘ಸಾರಿ ಮಿಸ್ಟರ್ ಕೃಷ್ಣ, ನನ್ನೆಲ್ಲೂ ಹುಡುಕ್ಬೇಡಿ, ಎಲ್ಲೋ ಬದುಕೋ ಪ್ರಯತ್ನ ಮಾಡ್ತೀನಿ. ಇಷ್ಟ್ ದಿನ ಕೆಲಸ ಕೊಟ್ಟಿದ್ದಕ್ಕೆ ಥ್ಯಾಂಕ್ಸ್. ಗುಡ್ ಬಾಯ್.’

ಚೇಂಬರ್‌ನಿಂದ ಹೊರ ಬಂದಿದ್ದು ನಮ್ಮ ಮೊದಲನೆಯ ರಾತ್ರಿ ಇವರ ಪ್ರೇಮದ ವಿಷಯ ಮತ್ತು ಅವಳ ಜೊತೆಯೇ ಬದುಕುವುದೆಂಬ ನಿರ್ಧಾರ ಕೇಳಿ ರೂಮಿನಿಂದ ಹೊರ ಬಂದಂತೆಯೇ ಇತ್ತು.

ಇಲ್ಲಿಂದ ನಡೆದು ಬಿಡಬೇಕೆಂದು ಡ್ರಾಯರ್‌ನಲ್ಲಿದ್ದ ನನ್ನೆಲ್ಲಾ ವಸ್ತುಗಳ ಕವರಿಗೆ ತುರುಕಿದೆ. ಟೇಬಲ್ ಮೇಲೆ ತಡಕಾಡುವಾಗ ಮಡಚಿಟ್ಟಿದ್ದ ಒಂದು ಪತ್ರವಿತ್ತು.

‘ಪ್ರಿಯ ರಾಧಾ, ದಯವಿಟ್ಟು ಕ್ಷಮಿಸು. ನಿನ್ನ ಅಸಮಾಧಾನ ಅಸಂತೋಷಕ್ಕೆ ಕಾರಣವಾಗಿಬಿಟ್ಟೆನೆಂದು ನೋವಾಗುತ್ತಿದೆ. ನನ್ನ ಇಂಗಿತವನು ನೀ ತಿಳಿಯಬಹುದೆಂದು ತಡಕಾಡಿದೆ. ಬಾರಿಬಾರಿ ಕಣ್ಣಿಗೆ ಕಣ್ಣೊಟ್ಟೆ, ಮಾತನಾಡಿಸಿಯೂ ಬಿಟ್ಟೆ. ಸೂಜಿಯ ಮೊನೆಯಷ್ಟೂ ನನ್ನ ಭಾವ ನಿನ್ನ ತಾಕಲಿಲ್ಲ. ನನಗೂ ಆಚೆ, ಇನ್ನು ಎಷ್ಟೋ ಬೆನ್ನುಗಳಿಗೂ ಆಚೆ ನಿನ್ನ ಹುಡುಕಾಟವಿತ್ತು. ಮುಂದೆ ಬಂದು ಯಃಕಶ್ಚಿತ್ ಗಾಳಿ ಗೊಂಬೆಯಂತೆ ಕಾಣುವುದಕ್ಕಿಂತ, ಎಂದೋ ಒಮ್ಮೆ ಮಳೆಯಲ್ಲಿ ನೆಂದ ನೆನಪಿನಂತೆ ನಿನ್ನಾಳದಲ್ಲಿ ಉಳಿಯಲಿಚ್ಛಿಸುವೆ.

ಕೂಡದೇಯೇ ಉಳಿವ ಪ್ರೇಮವೆಂದೂ ಅಮರ. ಅದು ತನ್ನ ಅಭದ್ರತೆಯ ನೆಲೆಯಲ್ಲೇ ಕ್ಷಣಕ್ಷಣವೂ ಭಾವ ಭದ್ರತೆಗೆ ತುಡಿಯುತ್ತಿರುತ್ತದೆ. ಸಿಗದೇ ಇರುವ ಪ್ರೀತಿಯ ಪ್ರೀತಿಸುವುದೇ ಪರಮಾನಂದ. ನಿನ್ನ ಹಪಹಪಿಕೆಯೂ ಅದಕ್ಕೇ ಅಲ್ಲವೇ. ನಿನ್ನ ಮಿಡಿತಗಳ ಅನುಭವಿಸಿರುವ ನಾನು, ನಿನ್ನ ಕೃಷ್ಣ, ನಿನಗೆ ಸಿಕ್ಕರೂ ಸಿಗದಂತಿರಲಿ ಎಂದು ಹಾರೈಸಬಹುದಷ್ಟೇ.

ಇತಿ, ನಿನ್ನ ಕೃಷ್ಣನಾಗಬಯಸಿದ್ದ... ಹೆಸರು ಬೇಡಬಿಡು.’

ಇದಕ್ಕೆ ನಿರ್ಲಿಪ್ತತೆ ಎಂದು ಹೆಸರಿಡಲಾರೆ. ಕಣ್ಣಿನಲ್ಲಿ ಧಾರಾಕಾರವಾಗಿ ನೀರು ಸೋರುತ್ತಿತ್ತು. ಅದೆಷ್ಟೋ ಭಾವಗಳ ಸೋಂಕು ಅದಕೆ ತಾಕಿದಂತಿತ್ತು. ರಾಘವನ ಕಡೆ ತಿರುಗಿದೆ, ತಲೆಕೆಳಗೆ ಹಾಕಿದ್ದವನು ಮೇಲೆತ್ತಿರಲಿಲ್ಲ. ಇವರ್‍ಯಾರಿರಬಹುದೆಂದು ಸುತ್ತಲೂ ನೋಡಿದೆ. ಎಲ್ಲರೂ ಅವರವರ ಕೆಲಸಗಳಲ್ಲಿ ಮುಳುಗಿದ್ದರು. ಅವರ ಚೇಂಬರ್‌ನ ಬಾಗಿಲು ಮುಚ್ಚಿತ್ತು. ಆಫೀಸಿನ ಹೊರ ಬಾಗಿಲು ತೆರೆದಿತ್ತು. ಆಗಷ್ಟೆ ಧೋ ಮಳೆ ಸುರಿದು ನಿಂತಿತ್ತು.

---

## ಚೈತ್ರಾ ಕೋಟೂರ್

ರಂಗಭೂಮಿಯಿಂದ ನಟನೆಯ ಕ್ಷೇತ್ರಕ್ಕೆ ಬಂದ ಚೈತ್ರಾ ಕನ್ನಡದ ಕಿರುತೆರೆ ಧಾರಾವಾಹಿಗಳಲ್ಲಿ, ಸಿನಿಮಾಗಳಲ್ಲಿ ನಟಿಸಿದ್ದಾರೆ. ಇತ್ತೀಚೆಗೆ ಅವರು ಸಾಹಿತ್ಯದ ಕ್ಷೇತ್ರದಲ್ಲೂ ತೊಡಗಿಕೊಂಡಿದ್ದಾರೆ. 2015ರಲ್ಲಿ ಬೆಂಗಳೂರಿನ ಸುಚಿತ್ರಾ ಸಾಂಸ್ಕೃತಿಕ ಸಂಸ್ಥೆ ಏರ್ಪಡಿಸಿದ ಕಥಾ ಕಮ್ಮಟದಲ್ಲಿ ಭಾಗವಹಿಸಿ ಅಲ್ಲಿನ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದಿದ್ದಾರೆ. ಈ ಸ್ಪರ್ಧೆಯ ಸ್ಫೂರ್ತಿಯಿಂದ ಬರವಣಿಗೆಯನ್ನು ಆರಂಭಿಸಿರುವ ಚೈತ್ರಾ ಅವರ ಕೆಲವು ಕತೆಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಕವಿತೆ, ಚಿತ್ರಕಲೆ ಅವರ ಆಸಕ್ತಿಯ ಕ್ಷೇತ್ರಗಳು. ಪ್ರಸ್ತುತ ಅವರು ಯೋಗರಾಜ್ ಭಟ್ ನಿರ್ದೇಶನದ ‘ಮುಗುಳುನಗೆ’ ಸಿನಿಮಾದ ನಿರ್ದೇಶನ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ.